ಅಸಲು ದಾವಾ 62/2016 ಪಿ ಡಬ್ಲೂ: 1-ಶಂಕರಲಿಂಗಯ್ಯ

<u>ಸಾಕ್ಷಿಯನ್ನು ದಿನಾಂಕಃ **19.01.2024** ರಂದು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಬಿ ಎ ಜಿ ವಕೀಲರಿಂದಃ</u>

5. ದೊಡ್ಡ ನಂಜುಂಡರವರಿಗೆ ಒಟ್ಟು 26 ಎಕರೆ 1 ಗುಂಟೆ ಜಮೀನು ಇತ್ತು. ಅದರ ಸರ್ವೆ ನಂಬರ್ 7 ಆಗಿರುತ್ತದೆ. ಅದ ಹಳೇಹಳ್ಳಿಯಲ್ಲಿರುತ್ತದೆ. ಅವರಿಗೆ ತರೀಕೆರೆ ಗ್ರಾಮದಲ್ಲಿ ಕೂಡ ಭೂಮಿ ಇತ್ತು ಎಂದರೆ ಸರಿಯಲ್ಲ. ದೊಡ್ಡನಂಜುಂಡ ರವರಿಗೆ ಚಿಕ್ಕನಂಜುಂಡ ಎಂಬ ಸಹೋದರ ಇದ್ದರು. ಅವರಿಗೂ ಕೂಡ ಸರ್ವೆ ನಂ. 7 ರಲ್ಲಿ ಆಸ್ತಿ ಇದ್ದು ಅದು ಜಂಟಿ ಇರುತ್ತದೆ. ದೊಡ್ಡನಂಜುಂಡ ಹಾಗೂ ಚಿಕ್ಕನಂಜುಂಡ ರವರ ನಡುವೆ ವಿಭಾಗ ಆಗಿರುವುದಿಲ್ಲ. ದೊಡ್ಡನಂಜುಂಡ ರವರು ತೀರಿಕೊಂಡ ನಂತರ ಅವರ ಪತ್ನಿ ಮರಿಯಕ್ಕ ಮತ್ತು ಚಿಕ್ಕನಂಜುಂಡ ರವರ ನಡುವೆ ವಿಭಾಗ ಆಗಿತ್ತು ಎಂದರೆ ಸರಿಯಲ್ಲ. ದೊಡ್ಡನಂಜುಂಡ ರವರಿಗೆ 3 ಜನ ಮಕ್ಕಳು ಅವರೆಂದರೆ ನಂಜಮ್ಮ, ನಿಂಗಮ್ಮ ಮತ್ತು ಸಣ್ಣಮ್ಮ. ನಂಜಮ್ಮನನ್ನು ಮದ್ದೂರು ತಾಲ್ಲೂಕಿನ ತರೀಕೆರೆಗೆ ಮದುವೆ ಮಾಡಿಕೊಡಲಾಗಿತ್ತು. ನಿಂಗಮ್ಮನನ್ನು ತುಮಕೂರು ಜಿಲ್ಲೆಯ ಹುಲಿಯೂರು ದುರ್ಗ ಹೋಬಳಿಯ ಪಾವಸಂದ್ರಕ್ಕೆ ಮದುವೆ ಮಾಡಿಕೊಡಲಾಗಿತ್ತು. ಸಣ್ಣಮ್ಮನನ್ನು ಮರಿಯಕ್ಕನ ತಮ್ಮನಿಗೆ ಮದುವೆ ಮಾಡಿಕೊಡಲಾಗಿತ್ತು ಎಂದರೆ ಸರಿಯಲ್ಲ. ಸಣ್ಣಮ್ಮ ಮರಿಯಕ್ಕನ ಮಗಳು ಎಂದರೆ ಸರಿ. ಮರಿಗೌಡ ಸಣ್ಣಮ್ಮನ ಗಂಡ ಎಂದರೆ ಸರಿ. ಸದರಿ ಮರಿಗೌಡ ಮರಿಯಕ್ಕನ ಸಹೋದರ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 11 ರಿಂದ 16 ರವರು ಬೋರೇಗೌಡರ ಮಕ್ಕಳು ಎಂದರೆ ಸರಿ. ಬೋರೇಗೌಡನನ್ನು ಸಣ್ಣಮ್ಮ ದತ್ತಕಕ್ಕೆ

ಪಡೆದುಕೊಂಡಿದ್ದರು ಎಂದರೆ ಸರಿ. ಬೋರೇಗೌಡ ನನಗೆ ದೊಡ್ಡಪ್ಪನಾಗಬೇಕು. ನಂಜಮ್ಮ ನಿಂಗಮ್ಮ ಮತ್ತು ಸಣ್ಣಮ್ಮ ಅವರ ತಂದೆಯ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುವುದಿಲ್ಲ. ಸಣ್ಣಮ್ಮನನ್ನು ಅವರ ತಂದೆ ಮನೆಯಲ್ಲಿ ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ. ಆಕೆ ಮತ್ತು ಆಕೆಯ ಗಂಡ ಕುಟುಂಬದ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಂಜಮ್ಮ ಮತ್ತು ನಿಂಗಮ್ಮ ದಾವಾ ಆಸ್ತಿಗಳಲ್ಲಿರುವ ತಮ್ಮ ಹಕ್ಕನ್ನು ಸಣ್ಣಮ್ಮ ನಿಗೆ ಬಿಟ್ಟುಕೊಟ್ಟಿದ್ದರು ಎಂದರೆ ಸರಿಯಲ್ಲ. ಸಣ್ಣಮ್ಮ ಮತ್ತು ಆಕೆಯ ತಾಯಿ ಮರಿಯಕ್ಕ ಸಣ್ಣಮ್ಮನ ಗಂಡ ಬೋರೇಗೌಡನಿಗೆ ಖಾತೆ ಮಾಡಲು ಒಪ್ಪಿಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಬೋರೇಗೌಡ ಮತ್ತು ಸಣ್ಣಮ್ಮನವರು ದೊಡ್ಡ ನಂಜುಂಡರವರ ಆಸ್ತಿಯ ಸಂಪೂರ್ಣ ಮಾಲೀಕತ್ವ ಮತ್ತು ಸ್ವಾಧಿನತೆಯಲ್ಲಿ ಇದ್ದರು ಎಂದರೆ ಸರಿಯಲ್ಲ. ಸಣ್ಣಮ್ಮ ಮತ್ತು ಬೋರೇಗೌಡ ದಿಃ 20.05.1967 ರಂದು 2 ಎಕರೆ 7 ಗುಂಟೆ ಜಮೀನನ್ನುದಾವಾ ಸರ್ವೆನಂಬರಲ್ಲಿ ಚಿಕ್ಕೋನು ಬಿನ್ ಅಂಕೇಗೌಡ ರವರಿಗೆ ಮಾಡಿದ್ದಾರೆ ಎಂದರೆ ಸುಳ್ಳು. ಪ್ರತಿವಾದಿ 11 ರಿಂದ 16 ರವರು ಸದರಿ ಬೋರೇಗೌಡನ ಮಕ್ಕಳಾಗಿದ್ದಾರೆ ಎಂದರೆ ಸರಿ. ಪ್ರತಿವಾದಿ 2 ರಿಂದ 4 ರವರು ಚಿಕ್ಕನಂಜುಂಡ ರವರ ವಾರಸುದಾರರಾಗಿರುತ್ತಾರೆ. ಪ್ರತಿವಾದಿ 2 ರಿಂದ 4 ರವರು ದಿಃ 05.07.1965 ರಲ್ಲಿ ದಾವಾ ಸರ್ವೆ ನಂಬರ್ ನಲ್ಲಿ 2 ಎಕರೆ 20 ಗುಂಟೆ ಭೂಮಿಯನ್ನು ಕೆಂಪೇಗೌಡ ಎನ್ನುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಖರೀದಿದಾರರಾದ ಕೆಂಪೇಗೌಡ ಮತ್ತು ಚಿಕ್ಕೋನುರವರು ಅವರು ಖರೀದಿಸಿದ ಜಮೀನುಗಳಲ್ಲಿ ಸ್ವಾದೀನದಲ್ಲಿದ್ದರು ಎಂದರೆ ಸರಿಯಲ್ಲ.ನಂತರ ಕೆಂಪೇಗೌಡ ಮತ್ತು ಚಿಕ್ಕೋನುರವರು ರವರು ಖರೀದಿಸಿದ ಆಸ್ತಿಗಳನ್ನು ಪ್ರತಿವಾದಿ 17 ರವರಿಗೆ ಮಾರಾಟ ಮಾಡಿದರು ಎಂದರೆ ಸರಿಯಲ್ಲ. ನಿಪಿಃ 11

ಅನ್ನು ನಮಗೆ ಮೋಸ ಮಾಡಿ ಮಾರಾಟ ಮಾಡಿದ್ದಾರೆ ಎಂದು ಸಾಭೀತು ಮಾಡಲುಹಾಜರು ಪಡಿಸಿದ್ದೇನೆ. ಮಾರಾಟ ಮಾಡಿದ ವಿಚಾರ 2014 ರಲ್ಲಿ ಗೊತ್ತಾಗಿರುತ್ತದೆ. ನಿಪಿಃ12 ಅನ್ನು ಕೂಡ ನಮಗೆ ಭಾಗಾಂಶ ಬರಬೇಕೆಂದು ಸಾಭೀತು ಪಡಿಸಲು ಹಾಜರು ಪಡಿಸಿದ್ದೇನೆ. ನಿಪಿಃ11 ಮತ್ತು 12 ಅನ್ನು ಬೇರೆ ಕಡೆ ನಾನು ಪ್ರಶ್ನೆ ಮಾಡಿಲ್ಲ. ನಾನು ಪರಿಶೀಲಿಸಿದಾಗ ಕಂದಾಯ ದಾಖಲೆಗಳು ಮರಿಯಕ್ಕನ ವಾರಸುದಾರರಾದ ತಮ್ಮೇಗೌಡ, ಚಿಕ್ಕಮರಿಗೌಡ, ಚಿಕ್ಕತಾಯಮ್ಮ ಮತ್ತು ಚಿಕ್ಕನಂಜುಂಡರವರ ವಾರಸುದಾರರಾದ ನಂಜಪ್ಪ ಯಾನೆ ಸುಬ್ಬಣ್ಣ ರವರ ಹೆಸರಿನಲ್ಲಿ ಇತ್ತು. ಪಿತ್ರಾರ್ಜಿತವಾಗಿ ಅವರ ಹೆಸರಿಗೆ ಬಂದಿದ್ದವು.

ಮುಂದುವರಿದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.